ಕ್ವಶ್ಚನ್ ಕೇಳಿರುವುದು. ನೀವು ಇದರ ಬಗ್ಗೆ ತನಿಖೆ ಮಾಡಿಸಿ, 4 ಜನ ಎಕ್ಸ್‌ಪರ್ಟ್ ಜನರನ್ನು ಕರೆದುಕೊಂಡು ಹೋಗಿ ಸ್ಟೇಟ್‌ನಲ್ಲಿ ಎಂ.ಡಿ.ಆರ್. ಮತ್ತು ಸ್ಟೇಟ್ ಹೈವೇನಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆಂದು ಆವರೇಜ್ ತೆಗೆದುಕೊಂಡು ತನಿಖೆ ನಡೆಸಲು ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ : ಎಲ್ಲಾ ರಸ್ತೆಗೂ ಕೂಡ ಪ್ಲೈನ್ ರಸ್ತೆ ಇರುವುದಿಲ್ಲ, ಬ್ರಿಡ್ಜ್‌ಗಳು ಹಾಳಾಗಿದ್ದರೆ ಅದನ್ನು ಸಹ ರಿಪೇರಿಯಲ್ಲಿ ಸೇರಿಸುತ್ತಾರೆ. ಅದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಸರಾಸರಿಯಾಗಿ 1 ಕಿ.ಮೀಟರಿಗೆ ಸುಮಾರು 7 ಸಾವಿರ ರೂಪಾಯಿ ಖರ್ಚಾಗುತ್ತದೆ. ಆದರೂ ಕೂಡ ಈ ಬಗ್ಗೆ ತನಿಖೆಯನ್ನು ಮಾಡಿಸೋಣ.

ಕಾವಾಡಿ ಹೊಳೆಗೆ ಸೇತುವೆ ನಿರ್ಮಾಣ ಮಾಡುವ ಬಗ್ಗೆ.

1917-ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) *ದಕ್ಷಿಣ ಕನ್ನಡ ಜಿಲ್ಲೆಯ ಸಾಲಿಗ್ರಾಮ ಪುರಸಭೆಯ ಕಾರ್ಕಡ ಗ್ರಾಮದ ಕಾವಾಡಿ ಹೊಳೆಗೆ ಸೇತುವೆ ಒಡ್ಡನ್ನು ನಿರ್ಮಿಸುವುದರ ತುರ್ತು ಅವಶ್ಯಕತೆಯ ಮನವಿ ಸರ್ಕಾರಕ್ಕೆ ಬಂದಿದೆಯೆ?*

ಆ) *ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?*

(ವಿವರಗಳನ್ನು ತಿಳಿಸುವುದು)

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬಂದಿದೆ.

ಆ) ಕಾವಡಿ ಹೊಳೆಗೆ ಸೇತುವೆ ನಿರ್ಮಾಣ ಮಾಡುವ ಕಾಮಗಾರಿಯು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ಕಾರ್ಯ ವ್ಯಾಪ್ತಿಯಲ್ಲಿದ್ದು, ಸೇತುವೆ ರಚನೆಗೆ 30.00 ಲಕ್ಷ ರೂ.ಗಳ ವೆಚ್ಚಗಳಾಗುತ್ತದೆ. ಸದರಿ ಕಾಮಗಾರಿಯು ಜಿಲ್ಲಾ ಪರಿಷತ್ತಿನ ಯಾವುದೇ ಕ್ರಿಯಾ ಯೋಚನೆಯಲ್ಲಿ ಸೇರಿರುವುದಿಲ್ಲ.

ನದಿದಂಡೆ ಎತ್ತರಿಸುವ ಒಡ್ಡು ನಿರ್ಮಾಣ ಕಾಮಗಾರಿಯು ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಬರುತ್ತಿದ್ದು ಈ ಕಾಮಗಾರಿಗೆ ಸುಮಾರು 5.00 ಲಕ್ಷ ರೂ.ಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಈ ಕಾಮಗಾರಿಯು 1991-92ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಸೇರಿರುವುದಿಲ್ಲ. ಅನುದಾನದ ಲಭ್ಯತೆಯ ಮೇಲೆ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಸಲಾಗುವುದು.

ಶ್ರೀ ಪಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಸಾಲಿಗ್ರಾಮ ಕಾವಡಿ ನದಿ ದಂಡೆಯನ್ನು ಎತ್ತರಿಸುವ ಒಡ್ಡು ನಿರ್ಮಾಣದ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಆ ಕಾಮಗಾರಿಗೆ 5 ಲಕ್ಷ ರೂಪಾಯಿ ಖರ್ಚಾಗುತ್ತದೆಂದು ಉತ್ತರ ಕೊಟ್ಟಿದ್ದಾರೆ. ಆ ನದಿ ದಂಡೆಯನ್ನು ಎತ್ತರ ಮಾಡದೇ ಇರುವುದರಿಂದ ಸುಮಾರು ನೂರಾರು ಎಕರೆ ಜಮೀನಿಗೆ ಉಪ್ಪು ನೀರು ನುಗ್ಗಿ ಆವರ ಬೆಳೆಗಳಿಗೆ ತುಂಬಾ ಹಾನಿಯಾಗಿರುವುದರಿಂದ ಅದನ್ನು ಈ ವರ್ಷದಲ್ಲಿಯೇ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ : ಅದನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಪಿ. ಬಸವರಾಜ್ : ಅದೇ ರೀತಿ ಅದೇ ಹೊಳೆಗೆ ಸೇತುವೆಯನ್ನು ನಿರ್ಮಾಣ ಮಾಡಲು ಪ್ರಸ್ತಾವನೆಯನ್ನು ಮಾಡಿದ್ದಕ್ಕೆ, 30 ಲಕ್ಷ ಅಂದಾಜು ವೆಚ್ಚ ಆಗುತ್ತದೆಂದು ಉತ್ತರರನ್ನು ಕೊಟ್ಟಿದ್ದಾರೆ. ಇದು ಸದರಿ ಜಿಲ್ಲಾಪರಿಷತ್ತಿನ ಯಾವುದೇ ಯೋಜನೆಯಲ್ಲಿ ಸೇರಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ತಮಗೆ ಗೊತ್ತಿರುವ ಹಾಗೆ ಜಿಲ್ಲಾಪರಿಷತ್ತಿನಲ್ಲಿ ಯೋಜನೆಯಲ್ಲಿ ಸೇರಿಸಲಿಕ್ಕೆ ಹಣದ ಕೊರತೆ ಇರುವುದರಿಂದ, ಆ ಯೋಜನೆಯಲ್ಲಿ ಇದನ್ನು ಸೇರಿಸಲಿಕ್ಕೆ ಆಗಲಿಲ್ಲ. ಆದ್ದರಿಂದ ಇದಕ್ಕೆ ಸರ್ಕಾರವೇ ಹಣವನ್ನು ಕೊಡಿಸಿ ಈ ವರ್ಷವೇ ರಾಜ್ಯದ ಯೋಜನೆಯಲ್ಲಿ ಸೇರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ : ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಕೆಲಸವನ್ನು ಮಾಡುತ್ತೇವೆ.

ಕೂಡ್ಲಗಿ ತಾಲ್ಲೂಕಿನಲ್ಲಿರುವ ತಿಪ್ಪೇನಹಳ್ಳಿ ಕೆರೆಯ ದುರಸ್ತಿ ಕಾರ್ಯ.

2720- ಶ್ರೀ ರವೀಂದ್ರನಾಥ್ ಬಾಬು (ಕೊಟ್ಟೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:

1) *ಹಿಂದಿನ ಬಜೆಟ್ ಅಧಿವೇಶನದಲ್ಲಿ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ತಿಪ್ಪೇನಹಳ್ಳಿ ಕೆರೆಯ ದುರಸ್ತಿ ಕೆಲಸವನ್ನು 1991-92ನೇ ಸಾಲಿನ ಜಿಲ್ಲಾಪರಿಷತ್ತಿನ ಆಯವ್ಯಯದಲ್ಲಿ ಕೈಗೊಳ್ಳಲಾಗುವುದೆಂದು ತಿಳಿಸಿರುವುದು ಸರಿಯೇ ?*

2) *ಇದರ ಬಗ್ಗೆ ಜಿಲ್ಲಾ ಪರಿಷತ್‌ಗೆ ಸರ್ಕಾರದಿಂದ ಯಾವುದೇ ಸೂಚನೆ ನೀಡಿಲ್ಲದಿರುವುದು ಗೊತ್ತಿದೆಯೆ ?*

3) *ಈಗಾಲಾದರೂ ಮೇಲ್ಕಂಡ ಕೆರೆಯ ದುರಸ್ತಿ ಕೆಲಸವನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರವು ನಿರ್ದಿಷ್ಟವಾಗಿ ಉತ್ತರ ನೀಡುವುದೇ ?*

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

1) ಹೌದು.

2) ಈ ಕಾಮಗಾರಿಯು ಜಿಲ್ಲಾ ಪರಿಷತ್ತಿನ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ. ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನ ಕಾರ್ಯ ನಿರ್ವಾಹಕ ಅಭಿಯಂತರು ಈ ಕೆಲಸವನ್ನು 1991-92ನೇ ಸಾಲಿನ ಜಿಲ್ಲಾಪರಿಷತ್ತಿನ ಆಯವ್ಯಯದಲ್ಲಿ ಸೇರಿಸುವ ಸಲುವಾಗಿ ಪ್ರಸ್ತಾವನೆಯನ್ನು ಜಿಲ್ಲಾಪರಿಷತ್ತಿನ ಯೋಜನಾ ವಿಭಾಗಕ್ಕೆ ಕಳುಹಿಸಿರುತ್ತಾರೆ.

3) ಈ ಬಗ್ಗೆ ಜಿಲ್ಲಾಪರಿಷತ್ತಿನವರು ಕ್ರಮ ಕೈಗೊಳ್ಳಬೇಕಾಗುವುದು.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ನಾನು ಹೋದ ಅಸೆಂಬ್ಲಿಯಲ್ಲಿ ಈ ಪ್ರಶ್ನೆಯನ್ನು ಕೇಳಿದಾಗ ಮಂತ್ರಿಗಳು ಜಿಲ್ಲಾಪರಿಷತ್ತಿಗೆ ಆರ್ಡರನ್ನು ಕಳುಹಿಸಿದ್ದೇವೆ, ಅವರು ಮಾಡುತ್ತಾರೆಂದು ಹೇಳಿದ್ದರು. 1991-92ರ ಬಜೆಟ್‌ನಲ್ಲಿ ಅವರು ಸೇರಿಸಿಕೊಳ್ಳುತ್ತಾರೆಂದು ನಮಗೆ ಭರವಸೆಯನ್ನು ಕೊಟ್ಟಿದ್ದರು. ಆದರೆ ಜಿಲ್ಲಾಪರಿಷತ್ತಿನವರನ್ನು ಕೇಳಿದರೆ ನಮಗೆ ಆ ರೀತಿಯಾಗಿ ಸರ್ಕಾರದಿಂದ ಯಾವುದೂ ಆದೇಶ ಬಂದಿಲ್ಲ. ನಾವು ಯಾವುದನ್ನೂ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಏಕೆ ಈ ರೀತಿ ಸುಳ್ಳು ಹೇಳುತ್ತಿದ್ದಾರೆಂದು ನಮಗೆ ಅರ್ಥವಾಗುತ್ತಿಲ್ಲ. ಇದನ್ನು 1991-92ರ ಬಜೆಟಿಗೆ ಸೇರಿಸುತ್ತಾರಾ ಅಥವಾ ಇಲ್ಲವಾ? ಈ ಮೈನರ್ ಇರಿಗೇಷನ್ನಿಗೆ ಸಂಬಂಧಪಟ್ಟಂತೆ ಮೇಜರ್ ಸುಳ್ಳು ಹೇಳಿದರೆ ಹೇಗೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಇದು ಜಿಲ್ಲಾಪರಿಷತ್ತಿನ ಕಾರ್ಯವ್ಯಾಪ್ತಿಗೆ ಬರುತದೆ. ಆದರಿಂದ ಜಿಲಾಪರಿಷತಿನವರೇ ಮಾಡಬೇಕು.